2025-26 - Odd Sem

284667

40121

B.A. I Semester Degree Examination, December/January - 2025/26

KANNADA OPTIONAL

ಪ್ರಾಚೀನ ಮತ್ತು ಮಧ್ಯಕಾಲೀನ ಕನ್ನಡ ಸಾಹಿತ್ಯ

(New)

Time : 3 Hours **Maximum Marks : 80**

Instructions to Candidates:

1. ಭಾಷಾ ಶುದ್ಧಿಗೆ ಗಮನಕೊಡಲಾಗುವುದು.
2. ಬಲಗಡೆ ಬರೆದ ಸಂಖ್ಯೆಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳು.

1. ಪ್ರಾಚೀನ ಕನ್ನಡ ಸಾಹಿತ್ಯದ ಸ್ವರೂಪ ಮತ್ತು ಉಗಮ ವಿಕಾಸ ಕುರಿತು ಬರೆಯಿರಿ. **(1×10=10)**

(ಅಥವಾ)

ಪ್ರಾಚೀನ ಕನ್ನಡ ಸಾಹಿತ್ಯದ ಕವಿಗಳಾದ ಪಂಪ, ರನ್ನ ಮತ್ತು ನಯಸೇನರ ಜೀವನ ಮತ್ತು ಸಾಹಿತ್ಯಿಕ ಸಾಧನೆಯನ್ನು ಚರ್ಚಿಸಿರಿ.

2. ಮಧ್ಯಕಾಲೀನ ಕನ್ನಡ ಸಾಹಿತ್ಯದ ರೂಪಗಳಾದ ವಚನ, ರಗಳೆ ಮತ್ತು ಷಟ್ಪದಿ ಸಾಹಿತ್ಯವನ್ನು ಕುರಿತು ಬರೆಯಿರಿ. **(1×10=10)**

(ಅಥವಾ)

ಮಧ್ಯಕಾಲೀನ ಕನ್ನಡ ಸಾಹಿತ್ಯಕ್ಕೆ ಕನಕದಾಸರು ಮತ್ತು ಪುರಂದರದಾಸರ ಕೊಡುಗೆಯನ್ನು ಚರ್ಚಿಸಿರಿ.

3. ಕಾರ್ತಿಕ ಋಷಿಯ ಕಥೆಯ ಆಶಯ ಮತ್ತು ವಸ್ತುವನ್ನು ವಿವರಿಸಿರಿ. **(1×10=10)**

(ಅಥವಾ)

ಕುರುಕ್ಷೇತ್ರ ಯುದ್ಧದಲ್ಲಿ ಮಡಿದ ಕೌರವರಿಗಾಗಿ ದುರ್ಯೋಧನನು ಮರುಗಿದ ಪ್ರಸಂಗವನ್ನು ವಿಶದಿಕರೀಸಿರಿ.

4. ಪುಷ್ಪರಗಳೆಯಲ್ಲಿ ಹರಿಹರನ ಭಕ್ತಿ–ವೈಭವವನ್ನು ಚರ್ಚಿಸಿ ಬರೆಯಿರಿ. **(1×10=10)**

(ಅಥವಾ)

'ಚಂದ್ರಮತಿ ಪ್ರಲಾಪ' ಕಾವ್ಯಭಾಗದಲ್ಲಿ ಮಡು ಗಟ್ಟಿ ನಿಂತಿರುವ ಕರುಣ ರಸವನ್ನು ವಿವರಿಸಿರಿ.

5. **ಬೇಕಾದ ಮೂರಕ್ಕೆ ಟಿಪ್ಪಣಿ ಬರೆಯಿರಿ.** **(3×5=15)**

a) ತ್ರಿಪದಿ ಸಾಹಿತ್ಯ
b) ಸಂಚಿ ಹೊನ್ನಮ್ಮ
c) ಬೆದಂಡೆ
d) ಬ್ರಹ್ಮಶಿವ
e) ಚಾಮರಸ

[P.T.O.

6. ಬೇಕಾದ ಮೂರಕ್ಕೆ ಸಂದರ್ಭದೊಡನೆ ಸ್ಪಷ್ಟೀಕರಿಸಿರಿ. (3×5=15)

a) 'ಮಗನೆ ನಿನಗೆ ತಂದೆಯಪ್ಪಾತ ನೆನಗಂ'

b) ಕೃತಿಕೆಯಪ್ಪ ಕಿರಿಯ ಮಗಳಂ ಮದುವೆ

c) ನಿಜಜೀವಂ ಪರಲೋಕದೊಳ್ ನಿಜಮಹಾ ಮಾಂಸಂ ಪಿಶಾಚಾಸ್ಯದೊಳ್

d) ಕುಲಪತಿಯ ಜಡೆಗಳ್ಗೆ ಪೂಗಳಂ ತಾರವ್ವ

e) ಬಿಸುಡದಿರು ಬಿಸುಡದಿರು ಬೇಡ ಬೇಡಕಟಕಟ

7. ಒಂದು ವಾಕ್ಯದಲ್ಲಿ ಉತ್ತರಿಸಿರಿ. (10×1=10)

a) ಕನ್ನಡ ಮೊಟ್ಟಮೊದಲ ಶಾಸನ ಯಾವುದು?

b) ಕೋಗಳಿಯನ್ನಾಳುವ ಅರಸನ ಹೆಸರೇನು?

c) ಚಾವುಂಡರಾಯ ಬರೆದ ಕೃತಿ ಯಾವುದು?

d) ಕವಿರಾಜ ಮಾರ್ಗ ಕೃತಿ ರಚನೆಯ ಕಾಲ ಯಾವುದು?

e) ತಮಿಳಿನ ಯಾವ ಕೃತಿಯಲ್ಲಿ 'ಕರುನಾಡರ್' ಎಂಬ ಪದ ಕಂಡು ಬರುತ್ತದೆ?

f) ಶಿವಕೋಟ್ಯಾಚಾರ್ಯರ ಜನ್ಮ ಸ್ಥಳ ಯಾವುದು?

g) ಚಂದ್ರಮತಿಯ ಮಗನ ಹೆಸರೇನು?

h) ಅಕ್ಕಮಹಾದೇವಿಯ ಅಂಕಿತನಾಮ ಏನು?

i) ಷಟ್ಪದಿಯಲ್ಲಿ ಎಷ್ಟು ಸಾಲುಗಳಿರುತ್ತವೆ?

j) 'ರಾಮಧಾನ್ಯ ಚರಿತೆ' ಕೃತಿಯ ಕರ್ತೃ ಯಾರು?

142510

41301

B.Sc./B.C.A./B.F.T. III Semester Degree Examination,
December/January - 2025/26
ಅವಶ್ಯಕ ಕನ್ನಡ
ವಿಜ್ಞಾನ ಕನ್ನಡ – 3

Time : 3 Hours **Maximum Marks : 80**

Instructions to Candidates:

1. ಭಾಷೆ ಹಾಗೂ ಬರಹದ ಶುದ್ಧಿಗೆ ಗಮನ ಕೊಡಲಾಗುವುದು.
2. ಬಲಕ್ಕೆ ಬರೆದ ಅಂಕಗಳು ಪ್ರಶ್ನೆಗಳ ಪೂರ್ಣ ಅಂಕಗಳು.

1. ಕನ್ನಡ ನಾಡು ನುಡಿಯ ಪ್ರಾಚೀನತೆಯನ್ನು ಕುರಿತು ವಿವರಿಸಿರಿ. **(1×10=10)**

(ಅಥವಾ)

ಕರ್ನಾಟಕ ಏಕೀಕರಣ ಚಳುವಳಿಯನ್ನು ಕುರಿತು ವಿಶ್ಲೇಷಿಸಿರಿ.

2. ಬಸವಣ್ಣನವರ ವಚನಗಳಲ್ಲಿರುವ ವೈಚಾರಿಕತೆಯನ್ನು ಕುರಿತು ಬರೆಯಿರಿ. **(1×10=10)**

(ಅಥವಾ)

ಅಕ್ಕಮಹಾದೇವಿಯ ವಚನಗಳಲ್ಲಿರುವ ಸಾಮಾಜಿಕ ಚಿಂತನೆಗಳನ್ನು ಕುರಿತು ವಿವರಿಸಿರಿ.

3. 'ಅಮೃತಮತಿಯ ಸ್ವಗತ' ಮತ್ತು 'ಏನೆಂದು ಕರೆಯಲಿ?" ಈ ಕವಿತೆಗಳಲ್ಲಿರುವ ಸ್ತ್ರೀ ಶೋಷಣೆಯನ್ನು ಕುರಿತು ಚರ್ಚಿಸಿರಿ. **(1×10=10)**

(ಅಥವಾ)

ಮಂಕು ತಿಮ್ಮನ ಕಗ್ಗ ಮತ್ತು ಅಮ್ಮ, ಆಚಾರ ಮತ್ತು ನಾನು ಈ ಕವಿತೆಗಳ ಸಾಮಾಜಿಕ ಚಿಂತನೆಗಳ ಹಿನ್ನಲೆಯಲ್ಲಿ ವಿವರಿಸಿರಿ.

4. ಕಮಲಾ ಹಂಪನರವರು ತಮ್ಮ ಸಹಪಾಠಿಯಾಗಿದ್ದ ಹಂಪ ನಾಗರಾಜಯ್ಯ ಅವರ ಪ್ರೀತಿಗೆ ಒಳಗಾದ ಪ್ರಸಂಗವನ್ನು 'ಪ್ರೀತಿ–ಮೋಹದ ಸೆಳವು' ಗದ್ಯಭಾಗದ ಹಿನ್ನಲೆಯಲ್ಲಿ ಬರೆಯಿರಿ. **(1×10=10)**

(ಅಥವಾ)

'ಬಡತನದ ಬಸಿರಲ್ಲಿ ಬೆಳಕು' ಎಂಬ ಗದ್ಯಭಾಗದಲ್ಲಿರುವ ದೇ. ಜವರೇಗೌಡರವರ ಜೀವನದ ಅನುಭವಗಳನ್ನು ಕುರಿತು ಬರೆಯಿರಿ.

5. **ಬೇಕಾದ ಮೂರಕ್ಕೆ ಟಿಪ್ಪಣಿ ಬರೆಯಿರಿ.** **(3×5=15)**

a) ಅವ್ವ
b) ಬಿ.ಎಂ.ಶ್ರೀ.
c) ಕುವೆಂಪು
d) ಅನುಪಮಾ ನಿರಂಜನ
e) ಅಕ್ಕಮಹಾದೇವಿ

[P.T.O.

6. ಬೇಕಾದ ಮೂರಕ್ಕೆ ಸಂದರ್ಭದೊಡನೆ ಸ್ಪಷ್ಟೀಕರಿಸಿರಿ. (3×5=15)

a) ಕಲ್ಲನಾಗರ ಕಂಡಡೆ ಹಾಲನೆರೆಯೆಂಬರು;

b) ಚಿಲಿಮಿಲಿ ಎಂದು ಓದುವ ಗಿಳಿಗಳಿರಾ, – ನೀವು ಕಾಣಿರೆ, ನೀವು ಕಾಣಿರೆ .....

c) "ಅಷ್ಟು ಜನಪ್ರಿಯತೆಯಿದ್ದೂ ನಿಮ್ಮ ಹೆಸರನ್ಯಾಕೆ ಬದಲಾಯಿಸಿ ಕೊಂಡ್ರಿ"?

d) "ನಾನು ಪೂಜೆ ಇದೆ ಎಂದು ಹೇಳಿದ್ದೆನೇ ಹೊರತು ನೀವು ಬನ್ನಿ ಎಂದು ಕರೆದಿರಲಿಲ್ಲ"....

e) "ಬಡ್ಡಿ ಮಗನೆ, ನಿನ್ನ ಇಸ್ಕೂಲಿಗೆ ಹೋಗು ಅಂದೋರು ಯಾರು?

7. ಒಂದು ವಾಕ್ಯದಲ್ಲಿ ಉತ್ತರಿಸಿರಿ. (10×1=10)

a) ಕನ್ನಡದ ಕಣ್ವ ಎಂದು ಯಾರನ್ನು ಕರೆಯುತ್ತಾರೆ?

b) ಕುವೆಂಪುರವರ ಯಾವ ಕೃತಿಗೆ ಜ್ಞಾನಪೀಠ ಪ್ರಶಸ್ತಿ ಬಂದಿದೆ?

c) ಬಸವಣ್ಣನವರ ಜನ್ಮ ಸ್ಥಳ ಯಾವುದು?

d) 'ಅವ್ವ' ಕವಿತೆಯನ್ನು ಬರೆದವರು ಯಾರು?

e) ಡಿ.ವಿ.ಜಿಯವರು ಆರಂಭಿಸಿದ ದಿನ ಪತ್ರಿಕೆಯ ಹೆಸರೇನು?

f) 'ನಿತ್ಯೋತ್ಸವ' ಕವಿ ಎಂದು ಯಾರನ್ನು ಕರೆಯುತ್ತಾರೆ?

g) ಅನುಪಮಾ ನಿರಂಜನರವರ ಮೊದಲ ಹೆಸರೇನು?

h) ಕಮಲ ಹಂಪನಾ ಅವರ ಆತ್ಮ ಕಥೆ ಯಾವುದು?

i) ಕಾಂಗ್ರೆಸ್‌ನ ನಾಗಪುರದ ಅಧಿವೇಶನ ಯಾವಾಗ ನಡೆಯಿತು?

j) ಅಕ್ಕಮಹಾದೇವಿಯ ಅಂಕಿತನಾಮ ಯಾವುದು?

274992

70336

B.A./B.Com./B.Sc./B.F.D./B.F.T. III Semester Degree Examination,
December/January - 2025/26
ಆಯ್ಕೆಯ ಪತ್ರಿಕೆ (ಕನ್ನಡ)
ಕನ್ನಡ ಕಥಾ ಸಾಹಿತ್ಯ

Time : 2 Hours **Maximum Marks : 40**

Instructions to Candidates:

1. ಭಾಷೆ ಹಾಗೂ ಬರಹದ ಶುದ್ಧಿಗೆ ಗಮನ ಕೊಡಲಾಗುವುದು.
2. ಬಲಕ್ಕೆ ಬರೆದ ಅಂಕಗಳು ಪ್ರಶ್ನೆಗಳ ಪೂರ್ಣ ಅಂಕಗಳು.

1. a) ಸುಧಾಮೆಯ ಸತ್ಯಸಂಧತೆ ಕುರಿತು ಬರೆಯಿರಿ. **(1×10=10)**

(ಅಥವಾ)

b) ಕಳ್ಳರಿಂದ ತಪ್ಪಿಸಿಕೊಳ್ಳಲು ಗಂಭೀರೆಯು ಮಾಡಿದ ಉಪಾಯಗಳನ್ನು ಕುರಿತು ಬರೆಯಿರಿ.

2. a) ಮೋದಾಳಿ ಕಥೆಯಲ್ಲಿ ಮೋದಾಳಿಯ ಪಾತ್ರ ಕುರಿತು ಬರೆಯಿರಿ. **(1×10=10)**

(ಅಥವಾ)

b) ನಾಗಶ್ರೀ ಮಿತಬ್ರಹ್ಮಚರ್ಯವ್ರತ ಸ್ವೀಕರಿಸಲು ಕಾರಣವೇನು?

3. a) ವಸುಗಭಟ್ಟ ತನ್ನ ಮಕ್ಕಳಿಗೆ ಹೇಳಿದ ಕಥೆಯನ್ನು ವಿವರಿಸಿರಿ. **(1×10=10)**

(ಅಥವಾ)

b) ತಿರುಕನು ಕಂಡ ಕನಸನ್ನು ಕುರಿತು ಬರೆಯಿರಿ.

4. **ಎರಡಕ್ಕೆ ಟಿಪ್ಪಣಿ ಬರೆಯಿರಿ.** **(2×5=10)**

a) ಸುಮತಿ
b) ಮುಪ್ಪಿನ ಷಡಕ್ಷರಿ
c) ಗರುಡನಾಭಿ
d) ಶಿವಕೋಟ್ಯಾಚಾರ್ಯ

211275

30321

B.A. III Semester Degree Examination, December/January - 2025/26

ಕನ್ನಡ (ಐಚ್ಛಿಕ)

ಭಾರತೀಯ ಮತ್ತು ಪಾಶ್ಚಾತ್ಯ ಕಾವ್ಯಮೀಮಾಂಸೆ

Paper : DSC - 5

Time : 2 Hours **Maximum Marks : 60**

Instructions to Candidates:

1. ಭಾಷೆ ಹಾಗೂ ಬರಹದ ಶುದ್ಧಿಗೆ ಗಮನ ಕೊಡಲಾಗುವುದು.
2. ಬಲಕ್ಕೆ ಬರೆದ ಅಂಕಗಳು ಪ್ರಶ್ನೆಗಳ ಪೂರ್ಣ ಗುಣಗಳು.

1. ಕಾವ್ಯ ಲಕ್ಷಣಗಳನ್ನು ಲಾಕ್ಷಣಿಕರ ಹಿನ್ನೆಲೆಯಲ್ಲಿ ವಿವರಿಸಿರಿ. **(10)**

(ಅಥವಾ)

ಪ್ರತಿಭೆಯ ಸ್ವರೂಪ, ಲಕ್ಷಣಗಳನ್ನು ವಿವರಿಸಿರಿ.

2. ಆನಂದವರ್ಧನ, ವಾಮನ, ಕ್ಷೇಮೇಂದ್ರ ಅಲಂಕಾರಿಕರನ್ನು ಅವರ ಕೃತಿಯೊಂದಿಗೆ ಪರಿಚಯಿಸಿರಿ. **(10)**

(ಅಥವಾ)

ವಕ್ರೋಕ್ತಿ ತತ್ವದ ಕುರಿತು ವಿವರಿಸಿರಿ.

3. ರಸ ಸಿದ್ಧಾಂತ ಹಾಗೂ ರೀತಿ ಸಿದ್ಧಾಂತದ ಚರ್ಚೆಗಳನ್ನು ವಿಮರ್ಶಾತ್ಮಕವಾಗಿ ಬರೆಯಿರಿ. **(10)**

(ಅಥವಾ)

ಪ್ಲೇಟೋನ ಅನುಕರಣವಾದವನ್ನು ಚರ್ಚಿಸಿರಿ.

4. ಲಾಂಜಿನಸ್‌ನ ಮಹೋನ್ನತಿ ತತ್ವದ ಕುರಿತು ವಿವರಿಸಿರಿ. **(10)**

(ಅಥವಾ)

ಟಿ.ಎಸ್. ಎಲಿಯಟ್‌ನ ವ್ಯಕ್ತಿತ್ವ ನಿರಸನ ಸಿದ್ಧಾಂತದ ಕುರಿತು ವಿವರಿಸಿರಿ.

5. **ಬೇಕಾದ ಎರಡಕ್ಕೆ ಟಿಪ್ಪಣಿ ಬರೆಯಿರಿ.** **(2×5=10)**

a) ಕಾವ್ಯ ಪ್ರಯೋಜನ
b) ಕೆಥಾರ್ಸಿಸ್
c) ಟಿ.ಎಸ್. ಎಲಿಯಟ್
d) ಮಹೋನ್ನತಿ ಸಿದ್ಧಾಂತ

[P.T.O.

6. ಒಂದು ವಾಕ್ಯದಲ್ಲಿ ಉತ್ತರಿಸಿರಿ. (10×1=10)

a) ತೌಲನಿಕ ಕಾವ್ಯಮೀಮಾಂಸೆ ಕೃತಿಯ ಕರ್ತೃ ಯಾರು?

b) ಕಾರಯಿತ್ರಿ ಪ್ರತಿಭೆ ಯಾರಲ್ಲಿ ಇರುತ್ತದೆ?

c) ವಿ.ಎಂ. ಇನಾಂದಾರ್‌ರ ಮೀಮಾಂಸಾ ಕೃತಿ ಯಾವುದು?

d) ರೀತಿ ಸಿದ್ಧಾಂತದ ಪ್ರತಿಪಾದಕ ಯಾರು?

e) ವ್ಯುತ್ಪತ್ತಿ ಎಂದರೇನು?

f) ಪ್ಲೇಟೋನ ಗುರು ಯಾರು?

g) ಅರಿಸ್ಟಾಟಲ್‌ನ ಸಿದ್ಧಾಂತ ಯಾವುದು?

h) ಪ್ಲೇಟೋನ ಮೊದಲ ಹೆಸರೇನು?

i) ಅರಿಸ್ಟಾಟಲ್‌ನ ಗುರು ಯಾರು?

j) ಲಾಂಜಿನಸ್‌ನ ಕೃತಿ ಯಾವುದು?

128890

40301

B.A. III Semester Degree Examination, December/January - 2025/26

ಕನ್ನಡ ಅವಶ್ಯಕ

ಕಲಾ ಕನ್ನಡ – 3

Time : 3 Hours **Maximum Marks : 80**

Instructions to Candidates:

1. ಭಾಷೆ ಮತ್ತು ಬರಹದ ಶುದ್ಧಿಗೆ ಗಮನಕೊಡಲಾಗುವುದು.
2. ಬಲಕ್ಕೆ ಬರೆದ ಅಂಕಗಳು ಪ್ರಶ್ನೆಗಳ ಪೂರ್ಣ ಅಂಕಗಳು.

1. ಬಿ.ಎಂ. ಶ್ರೀ ಅವರು 'ಕನ್ನಡ ಮಾತು ತಲೆಯೆತ್ತುವ ಬಗೆ' ಕುರಿತು ನೀಡಿರುವ ಸಲಹೆಗಳನ್ನು ಕುರಿತು ವಿವರಿಸಿರಿ. **(1×10=10)**

(ಅಥವಾ)

ಕನ್ನಡ ನಾಡು ನುಡಿಗಳ ಪ್ರಾಚೀನತೆಯನ್ನು ಕುರಿತ ಡಾ. ಸೂರ್ಯನಾಥ ಕಾಮತ್ ಅವರ ವಿಚಾರಗಳನ್ನು ವಿಶ್ಲೇಷಿಸಿರಿ.

2. ಬದುಕಿನಲ್ಲಿ ಕುಲ ಜಾತಿಗಳು ಮುಖ್ಯವಲ್ಲ ಭಕ್ತಿ ಜ್ಞಾನ ಆಚರಣೆಗಳು ಮುಖ್ಯವೆಂಬುದನ್ನು ದಾಸರ ಕೀರ್ತನೆಗಳ ಪಠ್ಯ ಆಧರಿಸಿ ಬರೆಯಿರಿ. **(1×10=10)**

(ಅಥವಾ)

a) ಮಡಿ ಮಡಿ ಮಡಿಯೆಂದು
b) ಕುಲ ಕುಲವೆನ್ನುತಿಹರು ಮತ್ತು
c) ಕುಲ ಕುಲವೆಂದು ಹೊಡೆದಾಡದಿರಿ – ಇವುಗಳಲ್ಲಿ ಯಾವುದೇ ಎರಡರ ಭಾವಸೌಂದರ್ಯವನ್ನು ಬರೆಯಿರಿ.

3. ಕಟ್ಟುವೆವು ನಾವು ಕವನದಲ್ಲಿ ಗೋಪಾಲಕೃಷ್ಣ ಅಡಿಗರು ಕೆಡಕು ಜನರಿಗೆ ಸಾರುವ ಸಂದೇಶವೇನು? ವಿವರಿಸಿರಿ. **(1×10=10)**

(ಅಥವಾ)

'ಪರಂಪರೆ' ಕವನವು ಸ್ತ್ರೀ ಸಂವೇದನೆಯನ್ನು ಪ್ರತಿನಿಧಿಸುತ್ತಾ ಶೋಷಣೆಯನ್ನು ಹೇಗೆ ತೊಡೆದು ಹಾಕಬಹುದೆಂಬುದನ್ನು ಮಾರ್ಮಿಕವಾಗಿ ಅಭಿವ್ಯಕ್ತಿಸುತ್ತದೆ – ವಿಶ್ಲೇಷಿಸಿರಿ.

4. ಸಿಂಪಿ ಲಿಂಗಣ್ಣನವರು ರೈಲು ಪ್ರವಾಸದಲ್ಲಿ ತನ್ನ ಸಹ ಪ್ರಯಾಣಿಕನೊಂದಿಗೆ ನಡೆಸುವ ಸಂಭಾಷಣೆ ಹಳ್ಳಿಗಾಡಿನ ಮಾನವೀಯ ಸಂಬಂಧಗಳನ್ನು ಹೇಗೆ ಬಿಂಬಿಸಿದೆ – ವಿವರಿಸಿರಿ. **(1×10=10)**

(ಅಥವಾ)

ತನ್ನ ಬದುಕು ಕಲಿಸಿದ ಪಾಠದಿಂದ ಪ್ರೇರಣೆಗೊಂಡ ಡಾ. ಗೀತಾ ನಾಗಭೂಷಣ ಅವರು ಹೆಣ್ಣಿನ ಕೊರಳಿಗೆ ದನಿಯಾಗಿ ಹೇಗೆ ಅಭಿವ್ಯಕ್ತಿಸಿದ್ದಾರೆ – ವಿವರಿಸಿರಿ.

[P.T.O.

5. ಬೇಕಾದ ಮೂರಕ್ಕೆ ಟಿಪ್ಪಣಿ ಬರೆಯಿರಿ. **(3×5=15)**

a) ಕನ್ನಡತನವೊಂದಿದ್ದರೆ ನೀನಮ್ಮಗೆ ಕಲ್ಪತರು!
b) ಕುಂತಳ
c) ಆಚಾರವಿಲ್ಲದ ನಾಲಗೆ
d) ಅವ್ವ
e) ತಿಪ್ಪವ್ವಳ ಪ್ರೀತಿ

6. ಬೇಕಾದ ಮೂರಕ್ಕೆ ಸಂದರ್ಭದೊಡನೆ ಸ್ಪಷ್ಟೀಕರಿಸಿರಿ. **(3×5=15)**

a) ಉಪರಾಷ್ಟ್ರೀಯವಾದಿಗಳು ಬಯಸಿ ಹೋರಾಡಿದಂಥ ಏಕೀಕರಣವಲ್ಲ.
b) ನುಡಿ ನಡೆವ ಕಾಲದಲ್ಲಿ ದಾನ ಮಾಡದೆ ಇರಲು ಅಡವಿಯೊಳು ಕೆರೆ ತುಂಬಿ ಬತ್ತಿದಂತೆ.
c) ಗೆರೆದಾಟಬಾರದ ನಾನು ಕಾಯುತ್ತಿದ್ದೇನೆ ಉರಿವ ಸೌದೆಗಳ ಜೊತೆಗೆ ಪಾತ್ರೆಗಳಲ್ಲಿ ಕೊತ ಕೊತ ಕುದಿದು ಕಾಯುತ್ತಿದ್ದೇನೆ.
d) ದುಡಿತದ ಸಪ್ಪಳವೇ ಜೋಗುಳ ಹಾಡಿತು.
e) ಛೆ! ಕೇಳಿ ಹಳಸಿದ ಅವವೇ ಊರುಗಳು ಹೆಸರುಗಳು

7. ಒಂದು ವಾಕ್ಯದಲ್ಲಿ ಉತ್ತರಿಸಿರಿ. **(10×1=10)**

a) ಆರ್. ನರಸಿಂಹಾಚಾರ್ ಸೂಚಿಸಿರುವಂತೆ 'ಕನ್ನಡ' ಎಂಬುದರ ಮೂಲರೂಪ ಯಾವುದು?
b) ಕರ್ನಾಟಕ ಏಕೀಕರಣ ಚಳುವಳಿ ರಾಜಕೀಯ ಬಣ್ಣವನ್ನು ಪಡೆದ ವರ್ಷ ಯಾವುದು?
c) ಕುವೆಂಪು ಅವರು 'ಮೆಟ್ಟುವ ನೆಲ ಕರ್ನಾಟಕ'ದಲ್ಲಿ ಕನ್ನಡಿಗರಿಗೆ ಮಾಡುವ ಪ್ರೀತಿಯ ಆಗ್ರಹವೇನು?
d) ಅಂದಂದು ಮಾಡಿದ ಪಾಪವೆಂಬ ಮಲ ತಿಂದು ಹೋಗುವರು ಯಾರೆಂದು ಪುರಂದರದಾಸರು ಹೇಳುತ್ತಾರೆ?
e) ಜಲದ ಕುಲವೇನಾದರೂ ಬಲ್ಲಿರ, ಎಂದು ಕೇಳಿದವರಾರು?
f) ಸರೀಕರ ಎದುರು ತಲೆಯೆತ್ತಿ ನಡೆಯಲಿಕ್ಕೆ ಬದುಕಿದ್ದು ಯಾರು?
g) ಮೆಣಸಿನ ಚೊಟ್ಟು ಮುರಿಯುತ್ತ ಹಾಡು ನೇಯುವವಳು ಯಾರು?
h) ಕಣ್ಣಿಲ್ಲದ ಕಲ್ಲಪ್ಪಗೌಡರು ಯಾರಿಂದಲಾದರೂ ಓದಿಸಿ ಕೇಳುವ ಪತ್ರಿಕೆಗಳು ಯಾವುವು?
i) ಕುಟುಂಬದ ಜವಾಬ್ದಾರಿಯನ್ನು ಹೊತ್ತ ಅಜ್ಜಿ ಯಾವ ಅಡಿಗೆಯಿಂದ ಮಕ್ಕಳ ಹೊಟ್ಟೆಯನ್ನು ಶಾಂತಗೊಳಿಸುತ್ತಿದ್ದಳು?
j) ಡಾ. ಗೀತಾ ನಾಗಭೂಷಣ ಅವರು ಬಸವಣ್ಣನವರ ಯಾವ ಉಕ್ತಿಯನ್ನು ಒಪ್ಪಿಕೊಂಡು ಜೀವನದ ಹೊಳೆಯಲ್ಲಿ ಈಜಿಗಿಳಿದರು?

138249

42301

B.Com./B.B.A. III Semester Degree Examination,
December/January - 2025/26
ಕನ್ನಡ ಅವಶ್ಯಕ
ವಾಣಿಜ್ಯ ಕನ್ನಡ – 3

Time : 3 Hours **Maximum Marks : 80**

Instructions to Candidates:

1. ಭಾಷೆ ಹಾಗೂ ಬರಹದ ಶುದ್ಧಿಗೆ ಗಮನ ಕೊಡಲಾಗುವುದು.
2. ಬಲಕ್ಕೆ ಬರೆದ ಅಂಕಗಳು ಪ್ರಶ್ನೆಗಳ ಪೂರ್ಣ ಅಂಕಗಳು.

1. ಕರ್ನಾಟಕ ಏಕೀಕರಣದ ಪರಿಕಲ್ಪನೆ ಶ್ರೀಯವರ ದೃಷ್ಟಿಕೋನದಲ್ಲಿ ಮೂಡಿಬಂದ ಬಗೆಯನ್ನು ವಿವರಿಸಿರಿ. **(1×10=10)**

(ಅಥವಾ)

ಕನ್ನಡ ನಾಡು–ನುಡಿಗಳ ಪ್ರಾಚೀನತೆಯ ವಿಚಾರಧಾರೆಗಳು ಸಂಶೋಧನಾತ್ಮಕವಾಗಿ ಮೂಡಿಬಂದ ಬಗೆಯನ್ನು ಡಾ. ಸೂರ್ಯನಾಥ ಕಾಮತರವರ ಲೇಖನದ ಹಿನ್ನೆಲೆಯಲ್ಲಿ ವಿವರಿಸಿರಿ.

2. ವೈಚಾರಿಕ ಕ್ರಾಂತಿಯ ಮೂಲಕ ಮಾನವ ಸಮಾಜಕ್ಕೆ ಹೊಸ ಬೆಳಕಿನ ಅರಿವನ್ನು ಮೂಡಿಸುವಲ್ಲಿ ಬಸವಣ್ಣನವರ ವಚನಗಳ ಪ್ರಾಮುಖ್ಯತೆಯನ್ನು ವಿವರಿಸಿರಿ. **(1×10=10)**

(ಅಥವಾ)

ಅಕ್ಕಮಹಾದೇವಿ ವಚನಗಳಲ್ಲಿ ಕಂಡು ಬರುವ ಮನಶುದ್ಧಿ ವಿಚಾರಗಳನ್ನು ಬರೆಯಿರಿ.

3. 'ದೇವರ ಮೇಲೆ ದಾವೆ' ಮತ್ತು 'ಹೆಂಡತಿಯ ಕಾಗದ, ಕಾವ್ಯಗಳ ಭಾವಸ್ವಾರಸ್ಯವನ್ನು ವಿವರಿಸಿರಿ. **(1×10=10)**

(ಅಥವಾ)

'ನಾವು ಹುಡುಗಿಯರೇ ಹೀಗೆ' ಮತ್ತು 'ಅನ್ವೇಷಣೆ' ಕಾವ್ಯಗಳ ಭಾವ ಸ್ವಾರಸ್ಯವನ್ನು ವಿವರಿಸಿರಿ.

4. ಡಾ. ಆರ್.ಸಿ–ಹಿರೇಮಠರವರು ಬಡತನದ ಬೇಗೆಯಲ್ಲಿ ಬೆಂದು ಓದುವ ಹಂಬಲ ಮತ್ತು ಛಲದಿಂದ ಉನ್ನತ ಸ್ಥಾನಕೇರಿದ ಬಗೆಯನ್ನು ವಿವರಿಸಿರಿ. **(1×10=10)**

(ಅಥವಾ)

ಶಿವರಾಜ ಪಾಟೀಲರು ಸರಳ ಜೀವನ ಉದಾತ್ತ ವಿಚಾರಗಳನ್ನು ಹೊಂದಿದ ಬಗೆಯನ್ನು "ತಾಯಿಯ ಮುಖ ನೆನಪಿಲ್ಲ!" ಎಂಬ ಪಠ್ಯವನ್ನಾಧರಿಸಿ ವಿವರಿಸಿರಿ.

[P.T.O.

5. ಬೇಕಾದ ಮೂರಕ್ಕೆ ಟಿಪ್ಪಣಿ ಬರೆಯಿರಿ. (3×5=15)

a) ಬಸವಣ್ಣ
b) ಕೆ.ಎಸ್. ನರಸಿಂಹಸ್ವಾಮಿ
c) ಇಂದಿರಾ ಶಿವಣ್ಣ
d) ಮೆಟ್ಟುವ ನೆಲ ಕರ್ನಾಟಕ
e) ಪ್ರತಿಭಾ ನಂದಕುಮಾರ

6. ಬೇಕಾದ ಮೂರಕ್ಕೆ ಸಂದರ್ಭದೊಡನೆ ಸ್ಪಷ್ಟೀಕರಿಸಿ. (3×5=15)

a) "ಗೆಲವು ನಮ್ಮದು ದ್ರೋಹಿಗಳೇ!"
b) "ಹೋ ಈಗಲೆ ಅಡ್ಮಿಟ್ ಆಗಿ"
c) "ಯಾರು ಮಠದ ಈರವ್ವನೇ?"
d) "ನೀನೆಂದರೆ ಇಷ್ಟು ಸದರವೇ ದೇವ!"
e) "ಕನ್ನಡತನವೊಂದಿದ್ದರೆ ನೀನಮಗೆ ಕಲ್ವತರು!"

7. ಒಂದು ವಾಕ್ಯದಲ್ಲಿ ಉತ್ತರಿಸಿರಿ. (10×1=10)

a) 'ಕುಂತಲ ಜನಪದೇಶ್ವರ' ಎಂದು ಯಾರನ್ನು ಕರೆಯುತ್ತಿದ್ದರು?
b) ನವೋದಯ ಕವಿಗಳಿಗೆ ಪ್ರೇರಣೆಯಾದ ಶ್ರೀಯವರ ಕವನ ಸಂಕಲನ ಯಾವುದು?
c) 'ಕರ್ನಾಟ' ಎಂಬ ಶಬ್ದದ ಉಲ್ಲೇಖ ಮೊದಲ ಬಾರಿಗೆ ಎಲ್ಲಿ ಕಂಡು ಬರುತ್ತದೆ?
d) 'ಲಲಿತ ವಿಸ್ತರ' ಯಾವ ಧರ್ಮದ ಗ್ರಂಥವಾಗಿದೆ?
e) ಲೋಕದಲ್ಲಿ ಹುಟ್ಟಿದ ಬಳಿಕ ಯಾವ ಅಂಶಗಳಿಗೆ ಕವಿಗೊಡಬಾರದೆಂದು ಅಕ್ಕಮಹಾದೇವಿ ತಿಳಿಸುತ್ತಾಳೆ.
f) ಮಲೈ ಭಾಷೆಗೆ ತರ್ಜುಮೆಗೊಳ್ಳುತ್ತಿರುವ ಮುರ್ತುಜಾಬೇಗಂರವರ ಕೃತಿ ಯಾವುದು?
g) 'ಅನ್ವೇಷಣೆ' ಕವಿತೆಯ ರಚನಾಕಾರರು ಯಾರು?
h) ಡಾ. ಆರ್.ಸಿ. ಹಿರೇಮಠರವರ ಪೂರ್ಣ ಹೆಸರೇನು?
i) ನ್ಯಾಯಮೂರ್ತಿ ಶಿವರಾಜ ಪಾಟೀಲರ ಆತ್ಮಕಥನ ಯಾವುದು?
j) ಕೆ.ಎಸ್. ನರಸಿಂಹಸ್ವಾಮಿಯವರ ಯಾವ ಕವನಸಂಕಲನಕ್ಕೆ ಕೇಂದ್ರಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರೆತಿದೆ?

104894

40101

B.A. I Semester Degree Examination, December/January - 2025/26

ಅವಶ್ಯಕ ಕನ್ನಡ

ಕಲಾ ಕನ್ನಡ – 01

Time : 3 Hours **Maximum Marks : 80**

Instructions to Candidates:

1. ಭಾಷೆ ಹಾಗೂ ಬರಹ ಶುದ್ಧಿಗೆ ಗಮನ ಕೊಡಲಾಗುವುದು.
2. ಬಲಕ್ಕೆ ಬರೆದ ಅಂಕಗಳು ಪ್ರಶ್ನೆಗಳ ಪೂರ್ಣ ಅಂಕಗಳು.

1. ಸ್ತ್ರೀವಾದಿ ದೃಷ್ಟಿಕೋನ ಮಾನವತಾವಾದಕ್ಕಿಂತ ಭಿನ್ನವಲ್ಲ ನೇಮಿಚಂದ್ರರ ಲೇಖನದ ಹಿನ್ನಲೆಯಲ್ಲಿ ವಿವೇಚಿಸಿರಿ. **(10)**

(ಅಥವಾ)

ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಸ್ತ್ರೀ ಶರಣಾದ ಪರಿಯನ್ನು 'ಕೆರೆಗೆ ಹಾರ' ಚಿತ್ರಿಸಿದ ಬಗೆ ತಿಳಿಸಿರಿ.

2. ವೈಚಾರಿಕ ದೃಷ್ಟಿಕೋನದ ಹಿನ್ನಲೆಯಲ್ಲಿ ಬಸವಣ್ಣನವರ ವಚನಗಳ ಆಶಯಗಳನ್ನು ಬರೆಯಿರಿ.**(10)**

(ಅಥವಾ)

ಅಕ್ಕಮಹಾದೇವಿಯವರ ವಚನಗಳಲ್ಲಿ ವ್ಯಕ್ತವಾದ ಭಾವಗಳನ್ನು ತಿಳಿಸಿರಿ.

3. 'ಭಾವೈಕ್ಯತಾ ಪ್ರಾರ್ಥನೆ' ಮತ್ತು 'ಇಂದಿನ ದೇವರು' ಕವಿತೆಗಳ ಆಶಯಗಳನ್ನು ಚರ್ಚಿಸಿರಿ.**(10)**

(ಅಥವಾ)

'ಕತ್ತೆ ಮತ್ತು ಧರ್ಮ' ಹಾಗೂ ಸುಖ ಜೀವನ' ಕವಿತೆಗಳಲ್ಲಿನ ವಿಚಾರಗಳನ್ನು ಬರೆಯಿರಿ.

4. 'ಕತ್ತಲನು ತ್ರಿಶೂಲ ಹಿಡಿದ ಕಥೆ'ಯಲ್ಲಿಯ ಕತ್ತಲನ ಹಸಿವಿನ ನರಳಾಟವನ್ನು ವಿವರಿಸಿರಿ. **(10)**

(ಅಥವಾ)

ಮನುಷ್ಯ ಜೀವನದ ಭಾವನೆಗಳನ್ನು 'ಚೆಮ್ಮಾವುಗೆ' ಕಥೆ ನಿರೂಪಿಸಿದ ಬಗೆಯನ್ನು ತಿಳಿಸಿರಿ.

5. **ಬೇಕಾದ ಮೂರಕ್ಕೆ ಟಿಪ್ಪಣಿ ಬರೆಯಿರಿ.** **(3×5=15)**

a) ಶಿವಕೋಟ್ಯಾಚಾರ್ಯ
b) ಅಕ್ಕಮಹಾದೇವಿ
c) ಡಾ. ಸಿದ್ಧಲಿಂಗಯ್ಯ
d) ಕೆ.ಎಸ್. ನಿಸಾರ್ ಅಹಮ್ಮದ
e) ವಾಣಿಯ ಪಾತ್ರ

[P.T.O.

6. ಬೇಕಾದ ಮೂರಕ್ಕೆ ಸಂದರ್ಭದೊಡನೆ ಸ್ಪಷ್ಟೀಕರಿಸಿರಿ. (3×5=15)

a) "ಎನಗೆ ನೀಮುಂ ರಾಜ್ಯಪಟ್ಟಂಗಟಿದಪಿರೊ"...

b) "ನಮ್ಮ ಕುನ್ನಿಗೆ ಕೂಸ ಕೊಡಬೇಡ"

c) "ಸತ್ತ ಕಲ್ಗಳ ಮುಂದೆ ಅತ್ತು ಕರೆದುದು ಸಾಕು"

d) "ಕುರಿ ಹೋಗಿ ಮರಿನೆಕ್ಕಿ ! ತಾ ಶಿಶುವ ಮುದ್ದಿಕ್ಕಿ"

e) "ಏನು ಇಷ್ಟೊಂದು ಬೇಗ? ಸಿನಿಮಾ ಕ್ಹೋಗೋದಕ್ಕೋ"

7. ಒಂದು ವಾಕ್ಯದಲ್ಲಿ ಉತ್ತರಿಸಿರಿ. (10×1=10)

a) ಡಾ. ವಸು ಮಳಲಿಯವರು ಜನಿಸಿದ ಊರು ಯಾವುದು?

b) ಭಾಗೀರತಿಯ ಗಂಡನ ಹೆಸರೇನು?

c) 'ಹರಿಕ್ಷೇಣ' ಬರೆದ ಕೃತಿ ಯಾವುದು?

d) 'ಶೂದ್ರ ತಪಸ್ವಿ' ನಾಟಕ ರಚನೆಕಾರರು ಯಾರು?

e) 'ಅಕ್ಕಮಹಾದೇವಿ'ಯವರ ವಚನಾಂಕಿತ ಯಾವುದು?

f) ಕೆ.ಎಸ್. ನಿಸಾರ್ ಅಹಮದ್ – ವಿಸ್ತರಿಸಿ ಬರೆಯಿರಿ?

g) 'ಮಧುರಚೆನ್ನ' ಇದು ಯಾರ ಕಾವ್ಯನಾಮ?

h) ಕೊಡಗಿನ ಗೌರಮ್ಮನವರ ಕಥೆಗಳನ್ನು ಇಂಗ್ಲೀಷಿಗೆ ಅನುವಾದಿಸಿದವರು ಯಾರು?

i) ಕತ್ತಲ'ನ ಮಗಳ ಹೆಸರೇನು?

j) ಪ್ರೊ. ಎಚ್.ಟಿ. ಪೋತೆ ಅವರು ಹುಟ್ಟಿದ ಊರು ಯಾವುದು?

117241

41101

B.Sc./B.H.Sc./B.F.T./B.C.A. I Semester Degree Examination,
December/January - 2025/26
ಕನ್ನಡ ಅವಶ್ಯಕ BASIC KANNADA
ವಿಜ್ಞಾನ ಕನ್ನಡ – 1

Time : 3 Hours Maximum Marks : 80

Instructions to Candidates:

1. ಭಾಷೆ ಹಾಗೂ ಬರಹದ ಶುದ್ಧಿಗೆ ಗಮನ ಕೊಡಲಾಗುವುದು.
2. ಬಲಕ್ಕೆ ಬರೆದ ಅಂಕಗಳು ಪ್ರಶ್ನೆಗಳ ಪೂರ್ಣ ಅಂಕಗಳು.

1. ನೇಮಿಚಂದ್ರ ಅವರು ತಿಳಿಸಿದ 'ಸ್ತ್ರೀವಾದಿ ದೃಷ್ಟಿಕೋನ'ದ ತಾತ್ವಿಕ ವಿಚಾರಗಳನ್ನು ವಿವರಿಸಿರಿ. (10)

(ಅಥವಾ)

ಜನಪದ ತ್ರಿಪದಿಗಳಲ್ಲಿ ಮೂಡಿಬಂದ "ದಾಂಪತ್ಯ ದೀಪ್ತಿ" ಸಂಗತಿಗಳನ್ನು ವಿಮರ್ಶಾತ್ಮಕವಾಗಿ ಬರೆಯಿರಿ.

2. 'ಸಮಕಾಲೀನ ಸಮಾಜದ ಹಲವಾರು ಚಿತ್ರಣಗಳು ಕನಕದಾಸರ ಕೀರ್ತನೆಗಳಲ್ಲಿವೆ" ಎಂಬುದನ್ನು ನಿರೂಪಿಸಿರಿ. (10)

(ಅಥವಾ)

ಪುರಂದರದಾಸರ – 'ಆಚಾರವಿಲ್ಲದ ನಾಲಿಗೆ' ಮತ್ತು "ಜಾಲಿಯ ಮರದಂತೆ ಧರೆಯೊಳು ದುರ್ಜನರು" – ಕೀರ್ತನೆಗಳ ಭಾವ ಸ್ವಾರಸ್ಯವನ್ನು ವಿವರಿಸಿರಿ.

3. "ಹೆಣ್ಣು ಮಕ್ಕಳಿಗೆ ತಮ್ಮ ಮನಸ್ಸಿನ ಭಾವನೆಗಳನ್ನು ನಿರಾಳವಾಗಿ ಹಂಚಿಕೊಳ್ಳುವ ಸ್ಥಿತಿ ಇಂದು ಇಲ್ಲ" ಎಂಬುದನ್ನು" – ನಾವು ಹುಡುಗೀಯರು ಹೀಗೆ" ಕವಿತೆ ತಿಳಿಸುತ್ತದೆ ಹೇಗೆಂಬುದನ್ನು ವಿವರಿಸಿರಿ. (10)

(ಅಥವಾ)

'ನಿಮ್ಮ ಹೃದಯ ಭೀಕರ' ಮತ್ತು 'ಆತ್ಮ ಶ್ರದ್ಧೆ' ಕವಿತೆಗಳ ಭಾವ ಸ್ವಾರಸ್ಯವನ್ನು ವಿಮರ್ಶಾತ್ಮಕವಾಗಿ ಬರೆಯಿರಿ.

4. 'ಅವ್ವ' ಕಥೆಯ ರಸ ವಿಮರ್ಶೆ ನಿರೂಪಿಸಿರಿ. (10)

(ಅಥವಾ)

'ನಾನುಕೊಂದ ಹುಡುಗಿ' ಕಥೆಯ ನಾಯಕಿಯ ದುರಂತ ಅಂತ್ಯ ಕುರಿತು ಬರೆಯಿರಿ.

[P.T.O.

5. ಬೇಕಾದ ಮೂರಕ್ಕೆ ಟಿಪ್ಪಣಿ ಬರೆಯಿರಿ. (3×5=15)

a) ಸುಮತಿ ಮತ್ತು ಸುದಾಮೆಯ ಕಥೆ
b) ಸತ್ಯವಂತರ ಸಂಗವಿರಲು
c) ಈಸಬೆಕು ಇದ್ದು ಜಯಿಸಬೇಕು
d) ಪ್ರೀತಿ ಇಲ್ಲದ ಮೇಲೆ
e) ಬಿ.ಟಿ. ಲಲಿತಾ ನಾಯಕ

6. ಬೇಕಾದ ಮೂರಕ್ಕೆ ಸಂದರ್ಭದೊಡನೆ ಸ್ಪಷ್ಟೀಕರಿಸಿರಿ. (3×5=15)

a) "ಅಂಗೀಯ ಮ್ಯಾಲಂಗಿ ಛಂದೇನೊ–ನನ ರಾಯ"
b) "ಏನು ಬುದ್ಧಿ, ಏನಾಗ್ಬೇಕು, ಅಪ್ಪಣೆಯಾಗಲಿ'.
c) "ಉಣ್ರೆ ನೀಡಿಸ್ಕಂಡು ಹೊಟ್ಟೆ ತುಂಬ ಉಣ್ರಿ"
d) ನಮ್ಮ ಇಂದಿನ ಅವಸ್ಥೆಗೆ ಇವನೆ ಕಾರಣ ಅಂತ ರೋಷ ತಾಳುತ್ತೇವೆ"
e) "ಜಲ್ದಿ ರುಪೈ ಕುಡವ್ವಾ ಬ್ಯಾರೆ ಗಿರಾಕಿ ಗೋಳು ನಿಂತಾರ"

7. ಕೆಳಗಿನವುಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ. (10×1=10)

a) "Wonder that was India" ಕೃತಿಯ ಲೇಖಕರು ಯಾರು?
b) ಡಾ. ವಸು ಮಳಲಿ ಅವರ ಜನ್ಮಸ್ಥಳ ಯಾವುದು?
c) ನೇಮಿಚಂದ್ರ ಅವರು ಯಾವ ವೃತ್ತಿ ಮಾಡುತ್ತಿದ್ದರು?
d) ವಡ್ಡಾರಾಧನೆ ಕೃತಿಯಲ್ಲಿ ಎಷ್ಟು ಕಥೆಗಳಿವೆ?
e) ಕನಕದಾಸರ ಕೀರ್ತನೆಗಳ ಅಂಕಿತವೇನು?
f) "ಮಾನವ ಜನ್ಮ ದೊಡ್ಡದು" ಇದು ಯಾರು ಬರೆದ ಕೀರ್ತನೆಯಾಗಿದೆ?
g) ಶಿವರುದ್ರಪ್ಪನವರ ಜನನದ ವರ್ಷ ತಿಳಿಸಿರಿ.
h) ಕಥೆಗಾರ ಆನಂದ ಅವರ ಮೂಲ ಹೆಸರೇನು?
i) "ಯುಗದ ಕವಿ ಜಗದ ಕವಿ" ಎಂದು ಯಾರು ಖ್ಯಾತಿ ಪಡೆದಿದ್ದಾರೆ?
j) ಬೇಂದ್ರೆಯವರ ಯಾವ ಕೃತಿಗೆ ಜ್ಞಾನಪೀಠ ಪ್ರಶಸ್ತಿ ದೊರೆತಿದೆ?

110686

42101

B.Com. I Semester Degree Examination, December/January - 2025/26

ಅವಶ್ಯಕ ಕನ್ನಡ

ವಾಣಿಜ್ಯ ಕನ್ನಡ – 1

(New)

Time : 3 Hours **Maximum Marks : 80**

Instructions to Candidates:

1. ಭಾಷೆ ಹಾಗೂ ಬರಹದ ಶುದ್ಧಿಗೆ ಗಮನ ಕೊಡಲಾಗುವುದು.
2. ಬಲಗಡೆ ಬರೆದ ಅಂಕಗಳು ಪ್ರಶ್ನೆಗಳ ಪೂರ್ಣ ಅಂಕಗಳು.

1. ಸ್ತ್ರೀವಾದ ಎಂದರೇನು? ಸ್ತ್ರೀವಾದದ ತಾತ್ವಿಕತೆಯ ಚಿಂತನೆಗಳನ್ನು ಪಠ್ಯದ ಹಿನ್ನೆಲೆಯಲ್ಲಿ ವಿವರಿಸಿರಿ. **(1×10=10)**

(ಅಥವಾ)

ಜನಪದ ತ್ರಿಪದಿಗಳಲ್ಲಿ ಕಂಡುಬರುವ ಸುಖೀ ದಾಂಪತ್ಯ ಅನುಭವಗಳನ್ನು ಸಂಗ್ರಹಿಸಿ ಬರೆಯಿರಿ.

2. 'ಈಸಬೇಕು ಇದ್ದು ಜಯಿಸಬೇಕು' ಹಾಗೂ 'ನಿಂದಕರಿರಬೇಕು' ಕೀರ್ತನೆಗಳಲ್ಲಿನ ಚಿಂತನೆಗಳನ್ನು ಚರ್ಚಿಸಿರಿ. **(1×10=10)**

(ಅಥವಾ)

'ಎಲ್ಲರೂ ಮಾಡುವುದು ಹೊಟ್ಟೆಗಾಗಿ' ಹಾಗೂ 'ಕುಲಕುಲವೆಂದು ಹೊಡೆದಾಡದಿರಿ' ಕೀರ್ತನೆಗಳಲ್ಲಿ ವ್ಯಕ್ತವಾದ ಬದುಕಿನ ಸ್ವಾರ್ಥತೆ ಮತ್ತು ಸಾಮಾಜಿಕ ಅಸಮಾನತೆಯ ನಿವಾರಣೆ ಕುರಿತು ಬರೆಯಿರಿ.

3. 'ಆತ್ಮಶ್ರದ್ಧೆ' ಮತ್ತು 'ಹೆಣ್ಣು ಮಕ್ಕಳಿಗಿದು ಕಾಲವಲ್ಲ' ಕವಿತೆಗಳ ಆಶಯವನ್ನು ವಿವರಿಸಿರಿ. **(1×10=10)**

(ಅಥವಾ)

'ಡಿ.ವಿ.ಜಿ.'ಯವರ ಮಂಕುತಿಮ್ಮನ ಕಗ್ಗಗಳ ವೈಶಿಷ್ಟ್ಯ ಕುರಿತು ಬರೆಯಿರಿ.

4. 'ನರಬಲಿ ಕತೆಯಲ್ಲಿ ವ್ಯಕ್ತವಾದ ಹೆಣ್ಣಿನ ಸೂಕ್ಷ್ಮಮನದ ದ್ವಂದ್ವತೆ ಮತ್ತು ವಿಷಮತೆಗಳ ಕುರಿತು ಚರ್ಚಿಸಿರಿ. **(1×10=10)**

(ಅಥವಾ)

ದೇವನೂರು ಮಹಾದೇವ ಅವರ 'ಗ್ರಸ್ಥರು' ಕತೆಯಲ್ಲಿ ಮೂಡಿ ಬಂದ ಅಸಹಾಯಕತೆ ಮತ್ತು ಮೇಲ್ವರ್ಗದವರ ದೌರ್ಜನ್ಯ ಕುರಿತು ಚರ್ಚಿಸಿರಿ.

5. ಬೇಕಾದ ಮೂರಕ್ಕೆ ಟಿಪ್ಪಣಿ ಬರೆಯಿರಿ. **(3×5=15)**

a) ಶಿವಕೋಟ್ಯಾಚಾರ್ಯ
b) ಮಾನವ ಜನ್ಮ ದೊಡ್ಡದು

[P.T.O.

c) ಜಪವ ಮಾಡಿದರೇನು? ತಪವ ಮಾಡಿದರೇನು?
d) ದ.ರಾ. ಬೇಂದ್ರೆ
e) ಸಾರಾ ಅಬೂಬಕರ

6. ಬೇಕಾದ ಮೂರಕ್ಕೆ ಸಂದರ್ಭದೊಡನೆ ಸ್ಪಷ್ಟೀಕರಿಸಿ. (3×5=15)

a) ಕಾಣದಾ ರೂಪಂ ಕಂಡು ನಕ್ಕು ದುಃಖಮಂ ಮರೆದೊಳ್
b) 'ಜಾಲಿಯ ಮರದಂತೆ ಧರೆಯೊಳು ದುರ್ಜನರು'
c) 'ತಾನು ಉಣ್ಣದೆ ಪರರಿಗಿಕ್ಕದ ಧನವ್ಯಾತಕೆ'
d) 'ತಂದೆ ಹಿಡಿದಿಹ ದಾರಿ ಒಂದೆರಡು ದಿನದಲ್ಲಿ ಕೂಸು ಹಿಡಿದಿತು'
e) 'ನನ್ನ ಮಗಳು ಹೀಗಿದ್ದರೆ ಯಾರಿಗೂ ನಷ್ಟವಿಲ್ಲ'

7. ಒಂದು ವಾಕ್ಯದಲ್ಲಿ ಉತ್ತರಿಸಿರಿ. (10×1=10)

a) ವಸು ಮಳಲಿಯವರ ಹುಟ್ಟೂರು ಯಾವುದು?
b) 'ಯಾದ್ ವಶೇಮ್' ಇದು ಯಾರು ಬರೆದ ಕಾದಂಬರಿ?
c) ಅಗ್ನಿರಾಜನ ಕಿರಿಯ ಮಗಳ ಹೆಸರೇನು?
d) 'ಆಚಾರವಿಲ್ಲದ ನಾಲಗೆ' ಈ ಕೀರ್ತನೆ ಬರೆದವರು ಯಾರು?
e) ಕನಕದಾಸರ ಮೂಲ ಹೆಸರೆನು?
f) ಹೆಮ್ಮೆಪಡುತ್ತೇನೆ ಹೆಣ್ಣಾಗಿ ಹುಟ್ಟಿದ್ದಕ್ಕೆ ಈ ಕವಿತೆ ಯಾರದು?
g) ಪಠ್ಯಕ್ಕಿರುವ "ಪುಟ್ಟವಿಧವೆ" ಕವಿತೆ ಯಾರು ಬರೆದದ್ದು?
h) ಡಿ.ವಿ.ಜಿ.ಯವರ ಪೂರ್ಣ ಹೆಸರೇನು?
i) ಹೇಮಲತಾ ವಸ್ತ್ರದ ಅವರ ತಂದೆ–ತಾಯಿಯ ಹೆಸರೇನು?
j) 'ಚಂದ್ರಗಿರಿ ತೀರ'ದಲ್ಲಿ ಕಾದಂಬರಿಯ ಲೇಖಕಿ ಯಾರು?